


ಅಂದು ಬುದ್ಧನು ಮೌನಿಯಾಗಿದ್ದ. ಶಿಷ್ಯರಿಗೆಲ್ಲ ಚಿಂತೆ. "ಇಂದೇಕೆ ಇಷ್ಟು ಮೌನ? " —ಒಬ್ಬ ಶಿಷ್ಯ ಕೇಳಿದ.

ಬುದ್ಧ ಮೌನ ಮುರಿಯಲಿಲ್ಲ.

"ಒಡಲು ಸರಿಯಿಲ್ಲವೇ ? " —ಇನ್ನೊಬ್ಬ ಕೇಳಿದ. ಬುದ್ಧ ಸುಮ್ಮನಿದ್ದ.

ಹೊರಗಿನಿಂದ ಒಬ್ಬ ಭಕ್ತ "ಇಂದೇಕೆ ನನಗೆ ಸಭೆಗೆ ಪ್ರವೇಶಿಸಲು ಅವಕಾಶ ಕೊಡಲಿಲ್ಲ?" ಎಂದು ಜೋರಾಗಿ ಕೂಗಿದನು. ಅವನು ಹಾಗೆ ಆರ್ಭಟಿಸುತ್ತಲೇ ಇದ್ದನು.

ಶಿಷ್ಯನು ಬುದ್ಧನನ್ನು ಕೇಳಿದನು : "ಭಗವಾನ್, ಇಂದು ಅವನಿಗೇಕೆ ಪ್ರವೇಶವಿಲ್ಲ ?"

ಬುದ್ಧನು ಈಗ ಬಾಯಿ ತೆರೆದು ನುಡಿದನು, "ಅವನು ಅಸ್ಪೃಶ್ಯ" ಎಂದು. " ಅಸ್ಪೃಶ್ಯ! ಇದೇನಿದು!? ಇಲ್ಲಿ ಜಾತಿಗೆ ಅವಕಾಶವಿದೆಯೇ, ದೇವ! ? " ಎಂದು ಶಿಷ್ಯನು ಅಚ್ಚರಿಯಿಂದ ಕೇಳಿದನು. "ಹೂಂ, ಅವನು ನಿಜವಾಗಿಯೂ ಅಸ್ಪೃಶ್ಯ. ಅವನು ಕೋಪಗೊಂಡಿದ್ದಾನೆ. ಕೋಪಿಷ್ಠನಿಗೆ ಜೀವನದ ಏಕತೆ ಇಲ್ಲ. ಅವನು ತನ್ನ ಮತ್ತು ಇತರರ ಮನಸ್ಸಿಗೆ ಹಿಂಸೆಯನ್ನು ಮಾಡುತ್ತಾನೆ. ಕೋಪವೇ ಮೈಲಿಗೆಯಾಗಿ ಅವನು ಅಸ್ಪೃಶ್ಯನಾಗುತ್ತಾನೆ. ಏಕಾಂತದಲ್ಲಿದ್ದು ಪಶ್ಚಾತ್ತಾಪದಲ್ಲಿ ಬೆಂದು ಅವನು ಶುದ್ಧನಾಗಲಿ. ಅಹಿಂಸೆಯೇ ಪರಮಧರ್ಮವೆಂದು ಅರಿಯಲಿ."

ಹೀಗೆ ಬುದ್ಧನು ಎಲ್ಲರಿಗೂ ಎಚ್ಚರಿಕೆ ನೀಡಿದನು. ◆